## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 2014-15ನೇ ಸಾಲಿನ ಶಾಸನಬದ್ಧ ಅನುದಾನದ **ಮೂರನೇ** ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002 (3) ಬೆಂಗಳೂರು, ದಿನಾಂಕ: 02/12/2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007 ದಿನಾಂಕ: 27/03/2008.
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 287 ಗ್ರಾಪಂಅ 2014 ದಿನಾಂಕ: 09/09/2014 ಮತ್ತು 07/11/2014.
4) ಆರ್ಥಿಕ ಇಲಾಖೆ (ವೆಚ್ಚ-6) ಅ.ಟಿ.ಸಂಖ್ಯೆ: ಆಇ 177 ವೆಚ್ಚ-6/2014, ದಿನಾಂಕ: 03/07/2014.
5) ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. 03 ಟಿ.ಎಫ್.ಪಿ 2014 ದಿನಾಂಕ: 04/04/2014.
6) ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. 5 ಟಿ.ಎಫ್.ಪಿ. 2014 ದಿನಾಂಕ: 14/10/2014.

***

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಸರ್ಕಾರವು ಅಧಿಕರಿಸಿದೆ.

2014-15ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿ ಒಟ್ಟಾರೆ 616.62 ಕೋಟಿ (ಆರು ನೂರ ಹದಿನಾರು ಕೋಟಿ ಅರವತ್ತ ಎರಡು ಲಕ್ಷ ರೂಪಾಯಿಗಳು) ಗಳನ್ನು ಮೀಸಲಿರಿಸಲಾಗಿದೆ. ಈ ಅನುದಾನದಿಂದ 2011ನೇ ವರ್ಷದ ಜನಗಣತಿ ಆಧಾರದ ಮೇಲೆ ಎಂಟು ಸಾವಿರಕ್ಕಿಂತ (8000 ಕ್ಕಿಂತ) ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ 10.00 ಲಕ್ಷಗಳು ಹಾಗೂ ಎಂಟು ಸಾವಿರಕ್ಕಿಂತ ಹೆಚ್ಚಿಗೆ ಅಂದರೆ ಪ್ರತಿ 1000 ಜನ ಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1.00 ಲಕ್ಷ ಅನುದಾನವನ್ನು ಹೆಚ್ಚಿಸಲಾಗಿದೆ. ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (5) ಮತ್ತು (6) ರಲ್ಲಿನ ಆದೇಶದಂತೆ ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಅನುದಾನ 154.16 ಕೋಟಿ (ಒಂದು ನೂರ ಐವತ್ತನಾಲ್ಕು ಕೋಟಿ ಹದಿನಾರು ಲಕ್ಷ ರೂಪಾಯಿ) ಗಳನ್ನು ಬಿಡುಗಡೆ ಮಾಡಲು ಸಹಮತಿ ನೀಡಿದೆ. ಪ್ರಸ್ತುತ ರಾಜ್ಯದಲ್ಲಿ 5629 ಗ್ರಾಮ ಪಂಚಾಯಿತಿಗಳಿದ್ದು, ಇವುಗಳಲ್ಲಿ 1438 ಗ್ರಾಮ ಪಂಚಾಯಿತಿಗಳ ಜನಸಂಖ್ಯೆಯು ಎಂಟು ಸಾವಿರಕ್ಕಿಂತ ಹೆಚ್ಚಿದ್ದು ಇವುಗಳಿಗೆ ಒಟ್ಟು 197.52 ಕೋಟಿ ( ಒಂದು ನೂರ ತ್ತೊಂಬಂತೇಳು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳು) ಹಾಗೂ 4191 ಗ್ರಾಮ ಪಂಚಾಯಿತಿಗಳ ಜನ ಸಂಖ್ಯೆಯು ಎಂಟು ಸಾವಿರಕ್ಕಿಂತ ಕಡಿಮೆಯಿದ್ದು, ಇವುಗಳಿಗೆ ಒಟ್ಟು 419.10 ಕೋಟಿ (ನಾಲ್ಕು ನೂರ ಹತ್ತೊಂಬಂತ್ತು ಕೋಟಿ ಹತ್ತು ಲಕ್ಷ ರೂಪಾಯಿಗಳು) ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗಿದ್ದು, ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಅಕ್ಟೋಬರ್ 2014 ರಿಂದ ಡಿಸೆಂಬರ್ 2014 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಮೇಲೆ ಓದಲಾದ (3) ರ ಸರ್ಕಾರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ಪ್ರಥಮ ಮತ್ತು ದ್ವಿತಿಯ ತ್ರೈಮಾಸಿಕ ಕಂತಿನ

ಅನುದಾನದಲ್ಲಿ ಶೇಕಡಾ 75 ರಷ್ಟು ವೆಚ್ಚವನ್ನು ಸಿಬ್ಬಂದಿ ವೇತನ ಹಾಗೂ ವಿದ್ಯುತ್ ಬಿಲ್ಲು ಪಾವತಿಸಲು ಉಪಯೋಗಿಸಿರುವ ಷರತ್ತಿಗೆ ಒಳಪಟ್ಟು, ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಮಾಡಲಾಗು...ದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 287 ಗ್ರಾಪಂಅ 2014.**
**ಬೆಂಗಳೂರು, ದಿನಾಂಕ: 30-12-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತಿನ ಮೊತ್ತ 154.16 ಕೋಟಿ (ಒಂದು ನೂರ ಐವತ್ತನಾಲ್ಕು ಕೋಟಿ ಹದಿನಾರು ಲಕ್ಷ ರೂಪಾಯಿಗಳು) 2014-15 ನೇ ಸಾಲಿನ ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಒಂದು ಸಾವಿರ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1.00 ಲಕ್ಷ ಅನುದಾನವನ್ನು ಹೆಚ್ಚಿಸಲಾಗಿದೆ. ಈ ಕೆಳಕಂಡ ಮಾದರಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅನುಬಂಧ 1 ರಲ್ಲಿರುವಂತೆ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗಳು ಹಾಗೂ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಮೂರನೇ ಕಂತಿನಲ್ಲಿ ಬಿಡುಗಡೆ ಮಾಡುವ ಅನುದಾನದ ಪೈಕಿ ಶೇಕಡಾ 60 ರಷ್ಟನ್ನು ಅಕ್ಟೋಬರ್ 2014 ರಿಂದ ಡಿಸೆಂಬರ್ 2014 ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಶೇಕಡಾ 40 ರಷ್ಟು ಅನುದಾನವನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ: **31-01-2015** ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3-4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ, ನಂತರ ತಾಲ್ಲೂಕು ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್-ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 5 (ಐದು) ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್-ಲೈನ್ ಮುಖಾಂತರ ಜಮಾ ಆಗಿರಕ್ಕದ್ದು. ಯಾವುದೇ ಕಾರಣಕ್ಕೂ ಚೆಕ್ ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್-ಲೈನ್ ಮುಖಾಂತರ ವರ್ಗಾಯಿಸಿರುವ ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಗಳಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡತಕ್ಕದ್ದು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ, ವೇತನ ಪಾವತಿಸಿದ ವಿವರಗಳ ಮಾಹಿತಿಯನ್ನು ಪ್ರತಿ ತಿಂಗಳ 6ನೇ

ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.

ಮುಂದುವರೆದು, ಗ್ರಾಮ ಪಂಚಾಯಿತಿಗಳು ಹಿಂದಿನ ಸಾಲಿನಲ್ಲಿ ಬಾಕಿಯಿರುವ ಆಸ್ತಿ ತೆರಿಗೆ, ನೀರಿನ ತೆರಿಗೆ ಮತ್ತು ಫೀಜುಗಳ ಮೊತ್ತದಲ್ಲಿ ಶೇಕಡಾ 25 ರಷ್ಟು ಮತ್ತು 2014-15 ನೇ ಸಾಲಿನ ಬೇಡಿಕೆಯಲ್ಲಿ ಜಿಲ್ಲಾವಾರು ಈಗಾಗಲೇ ನಿಗಧಿಪಡಿಸಿರುವ ಶೇಕಡಾ ಗುರಿಯಂತೆ **"ವಸೂಲಿ ಮಾಡದ"** ಗ್ರಾಮ ಪಂಚಾಯತಿಗಳಿಗೆ, ನಾಲ್ಕನೆಯ ತ್ರೈಮಾಸಿಕ ಕಂತಿನ ಅನುದಾನದ ಪೈಕಿ ರೂ.1.00 ಲಕ್ಷ ಅನುದಾನವನ್ನು ತಡೆಹಿಡಿಯಲಾಗುವುದು. ಈ ರೀತಿ ತಡೆಹಿಡಿಯಾಲಾಗಿರುವ ಗ್ರಾಮ ಪಂಚಾಯತಿಯ ರೂ.1.00 ಲಕ್ಷ ಅನುದಾನವನ್ನು ಅದೇ ತಾಲ್ಲೂಕಿನ ಇತರೆ ಗ್ರಾಮ ಪಂಚಾಯತಿಯಲ್ಲಿ, ಒಳ್ಳೆಯ ಆಡಳಿತ ನೀಡುತ್ತಿರುವ ಅಂದರೆ ತೆರಿಗೆ ಪರಿಷ್ಕರಣೆ, ತೆರಿಗೆ ಮತ್ತು ನೀರಿನ ದರ ಸಂಗ್ರಹಣೆಯಲ್ಲಿ ಉತ್ತಮ ಕೆಲಸ ನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿಗಳ ನಡುವೆ ಸೂಕ್ತ ಪ್ರೋತ್ಸಾಹ ಧನದ ರೂಪದಲ್ಲಿ ನೀಡಲಾಗುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಗ್ರಾಅಪ 766 ಆಂಆಸ 2014 ದಿನಾಂಕ: 30-12-2014 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕಲಾವತಿ

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ).
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
(ದೂರವಾಣಿ ಸಂಖ್ಯೆ: 080-22032295)

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ನಿರ್ದೇಶಕರು, ಎನ್.ಎಂ.ಸಿ. ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ 30 ಜಿಲ್ಲಾ ಪಂಚಾಯಿತಿಗಳು.
6) ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಗಳು (ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ಕೋರಿದೆ).
7) ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು (ದೂರವಾಣಿ ಸಂಖ್ಯೆ: 080-22216450, 22215584)
8) ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
9) ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಅಪ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
3) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.

* ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 287 ಗ್ರಾಪಂಅ 2014, ದಿನಾಂಕ: 30-12-2014ರ ಅನುಬಂಧ - 1

2014-15ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡಬೇಕಾಗಿರುವ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತಿನ ವಿವರ

| ಕ್ರಮ ಸಂಖ್ಯೆ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲಾ ಪಂಚಾಯಿತಿ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | | | ಬಿಡುಗಡೆ ಮಾಡಬೇಕಾಗಿರುವ ಹಣ | | | ಮೂರನೇ ತ್ರೈಮಾಸಿಕ ಅನುದಾನ (ಕೋಟಿಗಳಲ್ಲಿ) |
|---|---|---|---|---|---|---|---|---|---|
| | | | 8001 ಹಾಗೂ ಮೇಲ್ಪಟ್ಟು | 8000 ಹಾಗೂ ಕಡಿಮೆ | ಒಟ್ಟು ✓ | ಪ್ರತಿ ಗ್ರಾ.ಪಂ.ಗೆ 8001 ಹಾಗೂ ಮೇಲ್ಪಟ್ಟ ಜನಸಂಖ್ಯೆ 1 ಸಾವಿರಕ್ಕೆ 1.00 ಲಕ್ಷದಂತೆ | ಪ್ರತಿ ಗ್ರಾ.ಪಂ.ಗೆ ರೂ. 10.00 ಲಕ್ಷದಂತೆ | ಒಟ್ಟು | |
| 01 | 461 | ಬಾಗಲಕೋಟೆ | 69 | 92 | 161 | 009.68 | 009.20 | 018.88 | 004.72 |
| 02 | 402 | ಬೆಂಗಳೂರು (ಗ್ರಾ) | 35 | 63 | 98 | 004.56 | 006.30 | 010.86 | 002.76 |
| 03 | 401 | ಬೆಂಗಳೂರು (ನಗರ) | 61 | 25 | 86 | 010.23 | 002.50 | 012.73 | 003.18 |
| 04 | 413 | ಬೆಳಗಾಂ | 169 | 317 | 486 | 025.52 | 031.70 | 057.22 | 014.31 |
| 05 | 418 | ಬಳ್ಳಾರಿ | 84 | 105 | 189 | 011.68 | 010.50 | 022.18 | 005.55 |
| 06 | 419 | ಬೀದರ್ | 52 | 123 | 175 | 006.87 | 012.30 | 019.17 | 004.79 |
| 07 | 414 | ಬಿಜಾಪುರ | 100 | 99 | 199 | 013.74 | 009.90 | 023.64 | 005.91 |
| 08 | 456 | ಚಾಮರಾಜನಗರ | 26 | 94 | 120 | 003.42 | 009.40 | 012.82 | 003.21 |
| 09 | 453 | ಚಿಕ್ಕಬಳ್ಳಾಪುರ | 16 | 135 | 151 | 002.06 | 013.50 | 015.56 | 003.89 |
| 10 | 408 | ಚಿಕ್ಕಮಗಳೂರು | 6 | 220 | 226 | 000.83 | 022.00 | 022.83 | 005.71 |
| 11 | 403 | ಚಿತ್ರದುರ್ಗ | 55 | 130 | 185 | 006.96 | 013.00 | 019.96 | 004.99 |
| 12 | 409 | ದಕ್ಷಿಣ ಕನ್ನಡ | 44 | 159 | 203 | 006.15 | 015.90 | 022.05 | 005.51 |
| 13 | 451 | ದಾವಣಗೆರೆ | 28 | 202 | 230 | 003.72 | 020.20 | 023.92 | 005.98 |
| 14 | 415 | ಧಾರವಾಡ | 23 | 104 | 127 | 003.10 | 010.40 | 013.50 | 003.38 |
| 15 | 462 | ಗದಗ | 23 | 83 | 106 | 002.95 | 008.30 | 011.25 | 002.81 |
| 16 | 417 | ಕಲಬುರಗಿ | 95 | 125 | 220 | 012.28 | 012.50 | 024.78 | 006.20 |
| 17 | 410 | ಹಾಸನ | 18 | 240 | 258 | 002.29 | 024.00 | 026.29 | 006.57 |
| 18 | 463 | ಹಾವೇರಿ | 24 | 184 | 208 | 003.25 | 018.40 | 021.65 | 005.41 |
| 19 | 411 | ಕೊಡಗು | 9 | 89 | 98 | 001.12 | 008.90 | 010.02 | 002.51 |
| 20 | 404 | ಕೋಲಾರ | 23 | 133 | 156 | 002.87 | 013.30 | 016.17 | 004.04 |
| 21 | 466 | ಕೊಪ್ಪಳ | 72 | 62 | 134 | 009.99 | 006.20 | 016.19 | 004.05 |
| 22 | 412 | ಮಂಡ್ಯ | 40 | 192 | 232 | 005.03 | 019.20 | 024.23 | 006.06 |
| 23 | 407 | ಮೈಸೂರು | 89 | 146 | 235 | 011.82 | 014.60 | 026.42 | 006.61 |
| 24 | 420 | ರಾಯಚೂರು | 101 | 64 | 165 | 013.75 | 006.40 | 020.15 | 005.04 |
| 25 | 452 | ರಾಮನಗರ | 16 | 114 | 130 | 002.10 | 011.40 | 013.50 | 003.38 |
| 26 | 405 | ಶಿವಮೊಗ್ಗ | 8 | 252 | 260 | 000.98 | 025.20 | 026.18 | 006.55 |
| 27 | 406 | ತುಮಕೂರು | 44 | 277 | 321 | 005.57 | 027.70 | 033.27 | 008.32 |
| 28 | 457 | ಉಡುಪಿ | 33 | 113 | 146 | 004.63 | 011.30 | 015.93 | 003.98 |
| 29 | 416 | ಉತ್ತರ ಕನ್ನಡ | 22 | 185 | 207 | 003.25 | 018.50 | 021.75 | 005.44 |
| 30 | 421 | ಯಾದಗಿರಿ | 53 | 64 | 117 | 007.12 | 006.40 | 013.52 | 003.38 |
| ಒಟ್ಟು | | | 1438 | 4191 | 5629 | 197.52 | 419.10 | 616.62 | 154.16 |

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.